ದಿನಾಂಕಃ 28-07-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ- 2 ನೇ ಎದುರುದಾರರ ಪರವಾಗಿ ಶ್ರೀ.ಎನ್.ವಿ.ಎನ್. ವಕೀಲರಿಂದಃ-**

ನನಗೆ ಅರ್ಜಿದಾರರ ಪರಿಚಯ ಇದೆ. ಅಪಘಾತವಾದ ಸ್ಥಳ ಅರ್ಜಿದಾರರ ಮನೆಗೆ ಸುಮಾರು 250 ಮೀಟರ್ ದೂರದಲ್ಲಿದೆ. ಅಪಘಾತವಾದ ರಸ್ತೆ ಮಧುಗಿರಿ-ಪಾವಗಡ ರಸ್ತೆಯಾಗಿರುತ್ತದೆ. ಈ ಅಪಘಾತ ಆ ದಿನ ಬೆಳಗ್ಗೆ 8.15 ಗಂಟೆ ಸಮಯದಲ್ಲಿ ಆಗಿರುತ್ತದೆ. ಆ ಸಮಯದಲ್ಲಿ ಆ ಸ್ಥಳದಲ್ಲಿ ವಾಹನಗಳ ಸಂಚಾರ ಕಡಿಮೆ ಇರುತ್ತದೆ ಎಂದರೆ ಸರಿ. ಅಪಘಾತವಾದ ಕಾಲಕ್ಕೆ ಮೃತ ಶಿವಣ್ಣ ಟಿ.ವಿ.ಎಸ್. ಗಾಡಿಯನ್ನು ಓಡಿಸಿಕೊಂಡು ಹೋಗುತ್ತಿದ್ದರು ಎಂದರೆ ಸರಿ. ಆ ಸಮಯದಲ್ಲಿ ಶಿವಣ್ಣ ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರು ಸ್ಥಳಕ್ಕೆ ಬಂದ ಸಮಯದಲ್ಲಿ ಹಾಜರಿದ್ದು, ಸ್ಥಳ ಪಂಚನಾಮೆಗೆ ಸಹಿ ಮಾಡಿರುತ್ತೇನೆ. ಆ ಸಮಯದಲ್ಲಿ ಪೊಲೀಸರು ಆ ಹೆಲ್ಮೆಟ್ ಚೂರುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಅಪಘಾತವಾದ ಸ್ಥಳ ನಾನು ಕೆಲಸ ಮಾಡುತ್ತಿದ್ದ ಸ್ಥಳದಿಂದ 100 ಅಡಿ ದೂರದಲ್ಲಿತ್ತು. ಅಪಘಾತವಾದ ಶಬ್ದ ಕೇಳಿ ನಾನು ಆ ಸ್ಥಳಕ್ಕೆ ಹೋದೆನು ಎಂದರೆ ಸರಿಯಲ್ಲ. ಸಾಕ್ಷಿಯು, ಅಪಘಾತವನ್ನು ನಾನು ಪ್ರತ್ಯಕ್ಷವಾಗಿ ನೋಡಿದ್ದೇನೆ ಎಂದು ಸ್ವತಃ ನುಡಿಯುತ್ತಾರೆ. ಅಪಘಾತಪಡಿಸಿದ ನಂತರ ಆ ಬುಲೇರೋ ವಾಹನದ ಚಾಲಕ ನಮ್ಮನ್ನು ನೋಡಿ ಸ್ಥಳದಿಂದ ವಾಹನ ಸಮೇತ ಓಡಿ

ಹೋದನು. ಆ ಬುಲೇರೋ ವಾಹನ ಬಿಳಿ ಬಣ್ಣದಿಂದ ಕೂಡಿತ್ತು. ಈ ಅಪಘಾತಕ್ಕೆ ಸಂಬಂಧಪಟ್ಟಂತೆ ನಾನು ದೂರು ನೀಡಿರುವುದಿಲ್ಲ. ಈ ದಿನ ನನಗೆ ನ್ಯಾಯಾಲಯಕ್ಕೆ ಬರುವಂತೆ ನ್ಯಾಯಾಲಯದಿಂದ ಸಮನ್ಸ್ ಬಂದಿರುವುದಿಲ್ಲ. ಈ ದಿನ 1 ನೇ ಅರ್ಜಿದಾರರ ಕೊರಿಕೆ ಮೇರೆಗೆ ನ್ಯಾಯಾಲಯಕ್ಕೆ ಬಂದಿರುತ್ತೇನೆ ಎಂದರೆ ಸರಿಯಲ್ಲ. ನಾನು ಅರ್ಜಿದಾರರಿಗೆ ಪರಿಹಾರ ಬರಲಿ ಎಂಬ ಕಾರಣಕ್ಕಾಗಿ ಅರ್ಜಿದಾರರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ